

ಚಿಕ್ಕ ಮಕ್ಕಳಿಗೆ ಐತಿಹಾಸಿಕ ಸ್ಥಳಗಳಿಗೆ ಕರೆದುಕೊಂಡು ಹೋದರೆ ಅವರಿಗೆ ಅದು ಕೇವಲ ಒಂದು ಕಟ್ಟಡ/ ಸ್ಮಾರಕವಾಗಿ ಕಂಡುಬರುತ್ತದೆಯೇ ಹೊರತು, ಐತಿಹಾಸಿಕ ಮೌಲ್ಯಗಳು ಆ ಮಕ್ಕಳ ಅರಿವಿಗೆ ಬರುವುದಿಲ್ಲ. ತೀರಾ ಚಿಕ್ಕ ವಯಸ್ಸಿನ ಮಕ್ಕಳಿಗೆ ಪ್ರಾಯೋಗಿಕವಾಗಿ ಅವರು ತಿಳಿದುಕೊಳ್ಳುವಂತಹ ವಿಷಯಗಳಾದ, ಪರಿಸರ, ಪ್ರಾಣಿ ಪಕ್ಷಿಗಳು, ನಮ್ಮ ಸಮಾಜದಲ್ಲಿ ಕಂಡುಬರುವ, ನಿತ್ಯ ಸಹಾಯಕರ ಬಗೆಗೆ ತಿಳಿಸಿಕೊಟ್ಟರೆ, ಆ ಮಕ್ಕಳ ಸಾಮಾನ್ಯ ಜ್ಞಾನದ ಮಟ್ಟ ಹೆಚ್ಚುತ್ತದೆ.

ಉದಾಹರಣೆಯೆಂದರೆ, ತೀರಾ ಚಿಕ್ಕ ಮಕ್ಕಳಿಗೆ ಒಂದು ದಿನದ ಪಿಕ್ನಿಕ್ ಮಾದರಿಯಲ್ಲಿ ಪ್ರಾಣಿ ಸಂಗ್ರಹಾಲಯ, ಮತ್ಸ್ಯಾಗಾರ, ಹಣ್ಣು ತರಕಾರಿ ಮಾರುಕಟ್ಟೆ, ಬಸ್ ಸ್ಟಾಂಡ್, ಹಾಸ್ಪಿಟಲ್, ಪೋಸ್ಟ್ ಆಫೀಸ್, ಪೊಲೀಸ್ ಸ್ಟೇಷನ್, ಸಾರಿಗೆ ವ್ಯವಸ್ಥಾ ವಾಹನಗಳ ಸ್ಥಳ ಇತ್ಯಾದಿ ಸ್ಥಳಗಳಿಗೆ ಕರೆದೊಯ್ಯಬೇಕು. ಅಲ್ಲಿ ನಾವು ನಿತ್ಯ ಬಳಸುವ ವಸ್ತುಗಳು ಮತ್ತದರ ಲಭ್ಯತೆಯ ಬಗೆಗಿನ ಪರಿಚಯ ಹಾಗೂ ನಮಗೆ ಅವರಿಂದ ಸಿಗುವ ಸಹಾಯದ ಬಗೆಗೆ ಪರಿಚಯಿಸಿದರೆ, ಮಕ್ಕಳಲ್ಲಿ ಸಮಾಜದ ಬಗೆಗೆ ಧನಾತ್ಮಕ ಭಾವನೆ ಮೂಡುತ್ತದೆ, ಅವರ ಸಾಮಾನ್ಯ ಜ್ಞಾನ ಹೆಚ್ಚುತ್ತದೆ.

ಎರಡನೆಯದಾಗಿ, ಪ್ರವಾಸಕ್ಕೆ ಆಯ್ಕೆ ಮಾಡಿಕೊಳ್ಳುವ ಸ್ಥಳ ಮಕ್ಕಳ ಪಠ್ಯ ಜ್ಞಾನಕ್ಕೆ ಪೂರಕವಾಗಿದೆಯೇ ಎಂಬುನ್ನು ಗಮನಿಸುವುದೂ ಮುಖ್ಯ. ಐತಿಹಾಸಿಕ ವಿಷಯಗಳು, ರಾಜರ ಆಳ್ವಿಕೆ, ಸ್ವಾತಂತ್ರ್ಯ ಸಂಗ್ರಾಮ, ಪುರಾತನ ನಾಗರಿಕತೆ, ಆಧುನೀಕರಣ, ಖಗೋಳ ಶಾಸ್ತ್ರ, ಪ್ರಪಂಚದ ವೈಪರೀತ್ಯಗಳು, ವಿವಿಧ ಪ್ರದೇಶದ ಭೌಗೋಳಿಕ ಸಂಗತಿ, ಆರೋಗ್ಯ ವಿಚಾರ– ಇನ್ನೂ ಹತ್ತು ಹಲವು ಪಠ್ಯಕ್ಕೆ ಸಂಬಂಧಿಸಿದ ವಿಷಯಕ್ಕೆ ಅನುಗುಣವಾಗಿ ಪ್ರವಾಸದ ಸ್ಥಳವನ್ನು ನಿಗದಿಪಡಿಸಬೇಕು. ಇದರಿಂದ ಮಕ್ಕಳಿಗೆ ಓದಿದ ಪಾಠಕ್ಕೂ, ತಾವು ಹೋದಲ್ಲಿ ಕಂಡ ವಿಷಯಕ್ಕೂ ಸಾಮ್ಯತೆಯನ್ನು ಕಾಣಲು ಮತ್ತು ಹೋಲಿಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಉದಾಹರಣೆಗೆ, ವಿಜ್ಞಾನದ ವಿಷಯದ ವಿದ್ಯಾರ್ಥಿಗಳಿಗೆ ಅದಕ್ಕೆ ಸಂಬಂಧಿಸಿದಂತೆ, ಯಾವುದಾದರೂ ನವೀನ ಮಾದರಿಯ ಪ್ರಯೋಗಾಲಯಗಳು, ಉತ್ಪಾಧನಾ ಘಟಕಗಳು ಇತ್ಯಾದಿ ಸ್ಥಳಗಳಿಗೆ ಕರೆದುಕೊಂಡು ಹೋಗಿ ಪ್ರಾಯೋಗಿಕವಾಗಿ ವಿಜ್ಞಾನ ಸಂಗತಿಗಳು, ಮತ್ತದರ ಬಳಕೆಯ ಬಗೆಗೆ ವಿವರಿಸಿದರೆ, ಅವರ ಕಲಿಕೆ ಸರಳ ಮತ್ತು ಯಶಸ್ವಿಯಾಗುತ್ತದೆ.

ಮೂರನೆಯದಾಗಿ, ಯಾವ ಸ್ಥಳ ನಿಗದಿಯಾಗಿದೆಯೋ ಆ ಸ್ಥಳದ ಮಹತ್ವ, ಅಲ್ಲಿನ ವಿಶೇಷ ಭೌಗೋಳಿಕ ಸಂಗತಿಗಳು, ಭಾಷೆ, ಸಂಪ್ರದಾಯ ಇತ್ಯಾದಿ ವಿಷಯಗಳ ಕುರಿತು ಮುಂಚಿತವಾಗಿಯೇ ಮಕ್ಕಳೊಂದಿಗೆ ಕೆಲ ಸಮಯ ಕುಳಿತು ಶಾಲೆಯಲ್ಲಿ ಚರ್ಚಿಸುವುದು ಒಳ್ಳೆಯದು. ಆಗ ಮಕ್ಕಳಿಗೆ ತಾವು ಹೋಗುವ ಸ್ಥಳದ ಬಗ್ಗೆ ಮಾಹಿತಿ ದೊರೆತು ಅವರಲ್ಲಿ ಆಸಕ್ತಿ ಮೂಡುತ್ತದೆ. ಅಂತೆಯೇ ಮಕ್ಕಳೊಂದಿಗೆ ಹೋಗುತ್ತಿರುವ ಸ್ಥಳದ ಕುರಿತಾಗಿ ಪುಟ್ಟದೊಂದು ಟಿಪ್ಪಣಿಯನ್ನು ತಯಾರಿಸಿ ಕೊಡಬೇಕು. ಅದಕ್ಕೆ ಅವರ ಜ್ಞಾನಕ್ಕೆ ತಕ್ಕಂತೆ ಗೊತ್ತಿರುವ ಪಠ್ಯದಲ್ಲಿ ಕಂಡುಬಂದ ವಿಷಯ/ ಸಂಗತಿಗಳನ್ನು ಗುರುತಿಸಿ ಹಂಚಿಕೊಳ್ಳಲು ತಿಳಿಸಬೇಕು. ಅದರ ಕುರಿತಾಗಿ ಮಕ್ಕಳ ಮನಸ್ಸಿಗೆ ಬರುವ ಸಂಶಯಗಳನ್ನು ನಿವಾರಿಸಿ ಪ್ರೋತ್ಸಾಹಿಸಬೇಕು.

ಕೊನೆಯದಾಗಿ ಶೈಕ್ಷಣಿಕ ಪ್ರವಾಸವೆಂದರೆ, ಕರೆದುಕೊಂಡು ಹೋದಲ್ಲಿಯ ಕೇವಲ ಸ್ಥಳ/ ಸ್ಮಾರಕ ವಷ್ಟೇ ಅಲ್ಲ, ಎಲ್ಲೆಲ್ಲಿ ಯಾವ್ಯಾವ ರೀತಿಯ ಶಿಕ್ಷಣವನ್ನು ಕೊಡಲು ಸಾಧ್ಯವೋ ಅಂತಹ ಪ್ರತಿಯೊಂದು ಸಂದರ್ಭವನ್ನೂ ಬಳಸಿಕೊಳ್ಳಬೇಕು. ಉದಾಹರಣೆಗೆ,  ರಸ್ತೆ ಬದಿಗೆ ಎಲ್ಲೆಂದರಲ್ಲಿ ಎಸೆಯುವ ಕಸಗಳು ಮತ್ತದರ ಪರಿಣಾಮ, ರಸ್ತೆಯಲ್ಲಿ ಜನರು ಹಾಗೂ ವಾಹನಗಳ ಸಂಚಾರ ಮಾದರಿ, ಟ್ರಾಫಿಕ್ ವ್ಯವಸ್ಥೆ, ಕೆರೆ ತೊರೆಗಳಲ್ಲಾಗಿರುವ ನೈರ್ಮಲ್ಯ ಇತ್ಯಾದಿ. ಜತೆಗೆ ಬೀಡಾಡಿ ಪ್ರಾಣಿಗಳು, ಪ್ರೇಕ್ಷಣೀಯ ಸ್ಥಳಗಳಲ್ಲಿ ವ್ಯಾಪಾರಸ್ಥರ ಸುಲಿಗೆ, ಯಾವೆಲ್ಲ ಆಹಾರಗಳು ಅನಾರೋಗ್ಯಕರ, ಯಾವುದು ಸರಿ, ಯಾವುದು ತಪ್ಪು, ಭಾಷಾ ವೈವಿಧ್ಯ, ಜನರ ಉಡುಪುಗಳು, ಆಚರಿಸುವ ಸಂಪ್ರದಾಯಗಳು, ಬೇರೆ ಬೇರೆ ಪ್ರದೇಶದಲ್ಲಿ ಬೆಳೆಯುವ ಹತ್ತು ಹಲವು ಹಣ್ಣು, ತರಕಾರಿ, ಬೆಳೆಗಳು, ಮಣ್ಣು, ನೀರಿನ ವೈವಿಧ್ಯತೆ– ಹೀಗೆ ಸಣ್ಣ ಪುಟ್ಟ ವಿಷಯಗಳನ್ನೂ ತೋರಿಸಿ ತಿಳಿಸುವುದಕ್ಕಿಂತ ಹೆಚ್ಚಿನ ಶಿಕ್ಷಣ ಬೇರೊಂದಿಲ್ಲ.

### ಈ ಸಂಗತಿಗಳನ್ನು ಗಮನಿಸಿ

- ಶೈಕ್ಷಣಿಕ ಪ್ರವಾಸ ಕೇವಲ ಆಕರ್ಷಣೆಗೆಂದು ಆಗಿರದೆ ಆದಷ್ಟು ಮಕ್ಕಳ ವಯಸ್ಸಿನ, ಮತ್ತವರ ಮನಸ್ಸಿನ ತಿಳುವಳಿಕೆಯ ಮಟ್ಟಕ್ಕೆ ಸರಿಯಾಗಿರಲಿ.
- ಗೌಜು, ಆಡಂಬರದ ಅನುಭವ ನೀಡುವುದಕ್ಕಿಂತ, ಪ್ರವಾಸವು ಸರಳ ಹಾಗೂ ಆದಷ್ಟು ಜಾಗರೂಕ ಸ್ಥಳವಾಗಿದ್ದರೆ ಉತ್ತಮ.
- ಮಕ್ಕಳಿಗೆ ಪ್ರವಾಸದ ಕುರಿತು ಸಣ್ಣದೊಂದು ಟಿಪ್ಪಣಿ, ವಿಶೇಷವಾಗಿ ಗಮನಿಸಬೇಕಾದ ಸಂಗತಿಗಳು ಮತ್ತು ಎಚ್ಚರಿಕೆಯಿಂದಿರುವ ಸಂಗತಿಗಳನ್ನು ಮೊದಲೇ ತಿಳಿಸಿ ಕೊಡಬೇಕು.
- ಮಕ್ಕಳಲ್ಲಿ ಹಲವು ಗುಂಪುಗಳನ್ನು ಮಾಡಿ, ಕೆಲವೊಂದು ಉಪವಿಷಯಗಳನ್ನು ನೀಡಿ ಅದರ ಬಗ್ಗೆ ಪುಸ್ತಕದಲ್ಲಿರುವ ಮಾಹಿತಿ ಮತ್ತು ಮಕ್ಕಳು ಇನ್ನಿತರ ಮೂಲಗಳಿಂದ ಕಲೆ ಹಾಕಿ ಮಾಹಿತಿ ತರುವ ಅಭ್ಯಾಸವನ್ನು ಮಾಡಿಸಿ.
- ಶೈಕ್ಷಣಿಕ ಪ್ರವಾಸದ ತಯಾರಿ ಕುರಿತಾಗಿ ಮಕ್ಕಳು ಮತ್ತವರ ಪೋಷಕರೊಂದಿಗೆ ಚರ್ಚೆ ಅಗತ್ಯ. ನಿರ್ವಾಹಕರು, ಹೋಗುತ್ತಿರುವ ಸ್ಥಳದಲ್ಲಿ ವಸತಿ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಮಕ್ಕಳಿಗೆ ತಿಳಿದಿರಬೇಕಾದ ತುರ್ತು ಮಾಹಿತಿಗಳು, ತುರ್ತು ಸಂದರ್ಭಗಳಲ್ಲಿ ಮಕ್ಕಳು ಯಾರಿಂದ ಸಹಾಯ ಪಡೆಯಬಹುದು– ಇವೆಲ್ಲಾ ವಿಷಯಗಳನ್ನು ಶಿಕ್ಷಕರು, ಪಾಲಕರು ಮತ್ತು ಮಕ್ಕಳಿಗೆ ಸ್ಪಷ್ಟವಾಗಿ ತಿಳಿಸಬೇಕು.
- ಮಕ್ಕಳಿಗೆ ಅವರ ವಯಸ್ಸಿಗೆ ತಕ್ಕಂತೆ ಅವರು ಇತರ ಸ್ಥಳಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಅವರ ಜವಾಬ್ದಾರಿಗಳೇನು ಎಂದು ಮುಂಚಿತವಾಗಿ ತಿಳಿಹೇಳಿ.
- ಶೈಕ್ಷಣಿಕ ಪ್ರವಾಸ ಹೋಗಿಬಂದ ಮೇಲೆ ಮಕ್ಕಳೊಂದಿಗೆ ಪೋಷಕರು ಮಾತನಾಡಬೇಕು. ಅವರ ಅನುಭವಗಳನ್ನು ಸಮಯ ಕೊಟ್ಟು, ಗಮನವಿಟ್ಟು ಆಲಿಸಬೇಕು.
- ಹೋದ ಕಡೆ ಅಪರಿಚಿತರ ಜೊತೆ ಮಕ್ಕಳ ಅನಗತ್ಯ ಸ್ನೇಹ ಅಥವಾ